ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ಬೀದರ್ ಜಿಲ್ಲೆಯಲ್ಲಿ ಪೊಲೀಸ್ ಮಹಿಳಾ ತರಬೇತಿ ಶಾಲೆ ಬಗ್ಗೆ

ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು):-

330(439) ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2016 ರಲ್ಲಿ ಬೀದರ್ ಜಿಲ್ಲೆಯ ಮನ್ನಳಿ ಗ್ರಾಮ ಸರ್ವೆ ನಂ.168 ರಲ್ಲಿ 99 ಎಕರೆ ಜಮೀನು, ಮಹಿಳಾ ಪೊಲೀಸ್ ತರಬೇತಿ ಶಾಲೆಗಾಗಿ ಮಂಜೂರಾದ ಸ್ಥಳಕ್ಕೆ ತಂತಿ ಬೇಲಿ ಹಾಗೂ ತಡೆಗೋಡೆ ನಿರ್ಮಿಸಲು ಅನುಮತಿ ಕೋರಿ ಮನವಿ ಸಲ್ಲಿಸಿದ್ದು, ಇಲ್ಲಿಯವರೆಗೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಮಂಜೂರಾತಿ ಯಾವಾಗ ನೀಡಲಾಗುವುದು; (ವಿವರ ನೀಡುವುದು)

(ಆ) ಈ ತರಬೇತಿ ಶಾಲೆಯಲ್ಲಿ 800 ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಉದ್ದೇಶಕ್ಕಾಗಿ ಶಾಲೆಯನ್ನು ತೆರೆಯಲು ಅನುಮತಿ ಕೋರಿ 8.12.2016 ರಂದು ಐ.ಜಿ.ಪಿ, ಬೆಂಗಳೂರು, ಇವರಿಗೆ ಅನುಮತಿ ಕೋರಿ ಅಂದಾಜು ವೆಚ್ಚದೊಂದಿಗೆ ಮನವಿ ಸಲ್ಲಿಸಲಾಗಿತ್ತು; ಅದು ಯಾವ ಹಂತದಲ್ಲಿದೆ; ಇದಕ್ಕೆ ಅನುಮತಿ ನೀಡುವುದು ಯಾವಾಗ; (ವಿವರ ಒದಗಿಸುವುದು)

(ಇ) ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ?